ಕರೆಯಬೇಕೆನಿಸಲಿಲ್ಲವಲ್ಲ. ಅದೇ ಪರಮಾಶ್ಚರ್ಯ! ನನ್ನೊಳಗೆ ಏನೋ ಸಂಭವಿಸುತ್ತಿರುವಂತೆ ಭಾಸವಾಗುತ್ತಿದೆ. ನಾನು ಬದಲಾಗುತ್ತಿದ್ದೆ. ಮನಸ್ಸೂ ದೇಹವೂ ಬದಲಾಗುತ್ತಿದೆ ಎನಿಸುತ್ತಿತ್ತು.

ಕ್ರಮೇಣ ನನ್ನ ದೈಹಿಕ ಬದಲಾವಣೆಗೆ ಕಾರಣ ಏನೆಂದು ನನ್ನ ಪ್ರಿಯ ಸಖಿಯಾದ ಮಂಜರಿಯಿಂದ ತಿಳಿಯಿತು. ನನಗೊಂದು ಮಗು ಬರುವುದಿತ್ತು. ಅದೂ ನನ್ನ ಒಡಲೊಳಗಿಂದಲೇ! ಸೂರ್ಯನ ಮಗು! ಖುಷಿಯಾಯಿತು. ಆದರೂ ಅಂದು ಸೂರ್ಯನೇ ಆ ಮಾತು ಹೇಳಬೇಕಾಗಿತ್ತು ಎನಿಸಿತ್ತು. ಜನಿಸುತ್ತಿದ್ದ ಮಗುವಿನ ಅಪ್ಪ ಅವನೇ ಅಲ್ಲವೇ. ಹೇಳುವುದಿರಲಿ, ಮತ್ತೆಂದೂ ಆತ ನನ್ನ ಬಳಿಗೇ ಬರಲಿಲ್ಲವಲ್ಲ...

ನನ್ನ ಇರುಳಿನ ಹೊಸ ಆಟದ ಬಗ್ಗೆ ಮಂಜರಿಗೆ ಗೊತ್ತಾಗಿತ್ತು. ಸೂರ್ಯನಂತಹ ತೇಜಸ್ವಿಯು ನನ್ನ ಪ್ರಿಯಕರನಾಗಿದ್ದಾನೆಂದು ಅವಳು ಸಂಭ್ರಮಿಸುತ್ತಿದ್ದಳು. ಆದರೆ ನನಗೊಂದೂ ತಿಳಿಯುತ್ತಿರಲಿಲ್ಲ. ಆಡಲು ಮಗುವು ಬೇಕಿತ್ತಷ್ಟೆ. ಉಬ್ಬಿ ಬರುತ್ತಿದ್ದ ಹೊಟ್ಟೆ, ನನ್ನ ಸಂಕಟ ಕಂಡು ಯಾರಿಗೂ ಏನೂ ಹೇಳಬೇಡ ಎಂದಿದ್ದಳು ಮಂಜರಿ.

ಅರಮನೆಯಲ್ಲಿ ನನಗೆ ಮದುವೆ ಮಾಡುವ ಮಾತಾಗುತ್ತಿತ್ತು. ಹಸ್ತಿನಾಪುರದ ಅರಸರ ಮನೆಗೆ ಸೊಸೆಯಾಗಿ ಹೋಗಬೇಕಾದ ಸುದ್ದಿ. ಹಸ್ತಿನಾಪುರ ಎಂದರೆ ಸಾಮಾನ್ಯ ಮನೆತನವೇ... ನನ್ನ ಅರಮನೆಯ ತುಂಬಾ ಸಡಗರ ಸಂಭ್ರಮ. ನನಗೆ ಈ ಮದುವೆ ಬೇಡವಾಗಿತ್ತು. ನಾನು ಕಳವಳಕ್ಕೀಡಾದೆ. ಚಡಪಡಿಸಿದೆ. ತಳಮಳಿಸಿದೆ. ನಾನಿರುವ ಪರಿಸ್ಥಿತಿಯಲ್ಲಿ ಏನಾದರೂ ವಿಷಯ ಹೊರಗೆ ಗೊತ್ತಾದರೆ ಆಗುವ ಮುಂದಿನ ಅನಾಹುತದ ತೀವ್ರತೆ ನನಗೆ ಅರಿವಾಗತೊಡಗಿತು.

ಮಂಜರಿಯೇ ನನ್ನ ಆಪತ್ತಿಗಾದಳು. 'ಹಸ್ತಿನಾವತಿಯ ಅರಸಿಯಾಗಿ ಹೋಗುವ ನಾನು, ನನ್ನ ಆ ಮಹಾಸಾಮ್ರಾಜ್ಯದ ಕಾರುಬಾರುಗಳನ್ನು ಬಿಟ್ಟು ಇತ್ತ ಬರುವುದುಂಟೆ?' ಎಂದು ಪ್ರಶ್ನಿಸುತ್ತಾ, ನನ್ನ ಭವಿಷ್ಯದ ವೈಭವವನ್ನು ಇನ್ನಿಲ್ಲದಂತೆ ಬಣ್ಣಿಸುತ್ತಾ, 'ಆಪ್ತ ಸಖಿಯರಾದ ನಾವು ನಾಲ್ಕಾರು ತಿಂಗಳು ಹಾಯಾಗಿ ಕಾಲಕಳೆಯಲು ಪ್ರವಾಸಕ್ಕೆ ಹೋಗಿಬರುತ್ತೇವೆ' ಎಂದು ಹೋದಲ್ಲಿ ಬಂದಲ್ಲಿ ಪೀಡಿಸುತ್ತಾ ನನ್ನಪ್ಪ ಅಮ್ಮನವರಿಗೆ ಚಿಟ್ಟುಹಿಡಿಸಿ ಒಪ್ಪಿಸಿದಳು. ಜಾಣೆ. ಸ್ವಲ್ಪ ಎಡವಟ್ಟು ಆಗಿದ್ದರೂ ಇಬ್ಬರಿಗೂ ತಲೆದಂಡ ಅಥವಾ ಗಡೀಪಾರಿನ ಶಿಕ್ಷೆ ನಿಶ್ಚಿತವಾಗಿತ್ತು. ನನ್ನ ಪ್ರಿಯ ಸಖಿ ನನಗಾಗಿ ಎಷ್ಟು ಅಪಾಯಕಾರಿ ಸಾಹಸದ ಶ್ರಮಕ್ಕೆ ಕೈ ಹಾಕಿದ್ದಳು? ಈಗ ಅದನ್ನೆಲ್ಲಾ ನೆನೆದರೂ ಮೈ ಮರುಗಟ್ಟುತ್ತದೆ

ಕೊನೆಗೂ ಒಪ್ಪಿಸಿಕೊಂಡು ಹೊರಟೆವು. ನೆಪಕ್ಕೆ ವನವಿಹಾರ. ಅದೇ ದೂರ್ವಾಸರ ಋಷ್ಯಾಶ್ರಮಕ್ಕೆ ಹೋದೆವು. ನನ್ನ ಪರಿಸ್ಥಿತಿಯ ಅರಿವಾದ ಋಷಿಗಳು 'ಅರಿಯದವಳಿಗೆ ಹಿರಿಯ ವರ' ನೀಡಿದೆನಲ್ಲಾ ಎಂದು ಬಹುವಾಗಿ ಪೇಚಾಡಿಕೊಂಡರು. ಎಂಥಾ ಪ್ರಮಾದ ಆಯಿತೆಂದು ನಾನೂ ಗೋಳಿಟ್ಟೆ. ಕೊನೆಗೆ ಮಂಜರಿಯೇ ಉಪಾಯ ಸೂಚಿಸಿದಳು.



'ವಿವಾಹಕಾರ್ಯ ಸಾಂಗವಾಗಿ ನಡೆಯಲು ಹಾಗೂ ಹಸ್ತಿನಾವತಿಯ ರಾಣಿಯಾಗಿ ಆ ವಂಶದ ಕೀರ್ತಿ, ವೈಭೋಗ, ಸಿರಿ–ಸಂಪತ್ತಿನ ವೃದ್ಧಿಗಾಗಿ ಕುಂತಿಯ ಕಡೆಯಿಂದ ಸುದೀರ್ಘ ಪೂಜೆ' ನಡೆಸುತ್ತಿರುವುದಾಗಿ ಋಷಿಗಳು ತಿಳಿಸಿದರು. ಯಾರೂ ಪೂಜೆಯ ನಡುವೆ ಮಾತನಾಡಿಸಬಾರದೆಂದು ಸ್ವಯಂ ಅಪ್ಪಣೆ ಕೊಡಿಸಿದರು. ನನ್ನಿಂದ ಹೊಸ ವ್ರತ ಮಾಡಿಸುತ್ತಿರುವುದಾಗಿ, ಅದು ಮುಗಿಯುವವರೆಗೂ ಯಾರ ಕಣ್ಣಿಗೂ ನಾನು ಕಾಣಿಸಿಕೊಳ್ಳಬಾರದೆಂದೂ ಹೇಳಿದರು. ನನ್ನ ತಾಯ್ತಂದೆಯರೂ ನನ್ನ ಯೋಗಕ್ಷೇಮದ ಬಗ್ಗೆ ಕಳವಳಗೊಳ್ಳದಂತೆ ಋಷಿಗಳೇ ನೋಡಿಕೊಂಡರು. ಅಸಲಿಗೆ ನಾವು ದಟ್ಟಾರಣ್ಯದ ನಡುವಲ್ಲಿ ಒಂದು ಪರ್ಣಕುಟೀರದಲ್ಲಿದ್ದೆವು.

ಆ ದಿನಗಳಲ್ಲಿ ನನಗೆ ಸೂರ್ಯನ ಮುಖವನ್ನೂ ನೋಡುವುದು ಬೇಕಿರಲಿಲ್ಲ. ಹಾಗೆಯೇ ಅವನಿಗೆ ನನ್ನ ಮುಖವನ್ನು ತೋರಿಸುವ ಇಚ್ಛೆಯಾಗಲಿಲ್ಲ. ನಾನು ಪರ್ಣಕುಟಿಯ ಹೊರಗೇ ಬರಲಿಲ್ಲ. ದಿನಗಳು ಉರುಳಿದಂತೆ, ನಾನೊಂದು ಕೂಸು ಹಡೆದೆ. ಗಂಡು ಕೂಸು. ಥೇಟ್ ಸೂರ್ಯನ ಹೋಳಪು

ಆಡಲು ಮಗು ಬೇಕೆಂದು ಹಂಬಲಿಸಿದವಳಿಗೆ, ಹಾಲೂಡು ಎಂದು ಮಗುವನ್ನಿತ್ತರೆ... ನನಗೆ ಬಹಳ ಸಂಕಟವಾಗುತ್ತಿತ್ತು. ಋಷಿಯ ಮೇಲೆ, ಸೂರ್ಯನ ಮೇಲೆ ಕೋಪವೆಂದರೆ ಕೋಪ. ಅಳುವ ಮಗುವನ್ನು ಅಪ್ಪಿಕೊಳ್ಳಲೂ ನಿರಾಕರಿಸಿಬಿಟ್ಟೆ. ಮಂಜರಿ ವಿಧವಿಧವಾಗಿ ನನ್ನನ್ನು ಸಮಾಧಾನ ಮಾಡುತ್ತಿದ್ದಳು. ನಿಧಾನವಾಗಿ ಹೊತ್ತು ಇಳಿಯುತ್ತಿತ್ತು. ಸೂರ್ಯನಿಗೆ ಗೊತ್ತಾಗಬಾರದು ನಾನು ಅವನ ಮಗುವನ್ನು ಹಡೆದಿದ್ದೇನೆಂದು. ಏಕೆ ಈ ಹಟ ಮನದಲ್ಲಿ ಹೆಡೆಯಾಡಿತೋ ಗೊತ್ತಿಲ್ಲ. ಮಂಜರಿಗೂ ತಿಳಿಯದಂತೆ ಒಂದು ಉಪಾಯ ಮಾಡುತ್ತಿದ್ದೆ. ಪಾಪ, ಅವಳು ನನ್ನ ಹೆರಿಗೆ ಮಾಡಿಸಿ, ಆಯಾಸಗೊಂಡು ಮಲಗಿದ್ದಳು. ಕತ್ತಲಾವರಿಸುತ್ತಿದ್ದಂತೆ ನಿಧಾನವಾಗಿ ಎದ್ದು, ಮಗುವನ್ನು ಎತ್ತಿಕೊಂಡು ಸರಸರನೆ ಹೊರ ನಡೆದೆ.

ಅಮ್ಮನಾದ ನನಗೆ ಬೇಡವಾದ ಕೂಸಾಗಿದ್ದ ಆ ಮಗುವನ್ನು ಎದೆಗೆ ಅಪ್ಪಿಕೊಂಡರೂ ಮಾತೃತ್ವದ ಭಾವನೆ ನನ್ನಲ್ಲಿ ಏಕೆ ಮೂಡಲಿಲ್ಲ? ಈಗ ಕರ್ಣ ನನ್ನ ಮಗನೆಂದು ನೆನೆದರೂ ಎದೆ ಹಾಲುಕ್ಕುತ್ತದೆ. ಆದರೆ ಆಗ? ಅಷ್ಟು ಕೊರಡಾಗಿದ್ದೆನಾ? ಬರಡಾಗಿದ್ದೆನಾ? ಹುಟ್ಟಿದ ಶುರುವಿನಿಂದ ನದಿಗೆ ಹಾಕುವವರೆಗೂ ನನಗೆ ಹಾಲೂಡ ಬೇಕೆನಿಸಲಿಲ್ಲವಲ್ಲ! ಅಷ್ಟು ಕಲ್ಲಾಗಿದ್ದೆನೆ?

ಕರ್ಣಾ... ಕರ್ಣಾ... ನನ್ನನ್ನು ಕ್ಷಮಿಸಿ ಬಿಡು ಮಗೂ... ಬಾ ಕಂದಾ, ಒಮ್ಮೆ ಈ ಕೆಟ್ಟ ತಾಯಿಯನ್ನು ಅಪ್ಪಿಕೋ.. ನಿನ್ನ ಬಾಳಿನ ಎಲ್ಲಾ ದೌರ್ಭಾಗ್ಯಕ್ಕೆ ಬಾಗಿಲು ತೆರೆದವಳು ನಾನು. ನನ್ನನ್ನು ಕ್ಷಮಿಸು ಮಗೂ. ನಿನ್ನಿಂದ ಉಳಿದವರ ಅದರಲ್ಲೂ ಅರ್ಜುನನ ಪ್ರಾಣ ಭಿಕ್ಷೆ ಬೇಡಿದೆನಲ್ಲಾ... ನಿನ್ನನ್ನೇ ಆಗ ಮೃತ್ಯುವಿನ ಬಾಯಿಗೆ ಹಾಕಿದ್ದವಳು ನಾನು. ಕರ್ಣಾ ಎಲ್ಲಾದರೂ ಹೋಗಿಬಿಡುವ ಬಾ ಮಗೂ... ದೂರ, ದೂರ... ನದಿಯಲ್ಲಿ ಅಂದು ತೇಲಿಹೋದ ಹಾಗೆ. ಈ ದೊರೆಸ್ಥಾನದ, ಆಳ್ವನದ ಆಸೆ ನಿನಗೆ ಕಿಂಚಿತ್ತೂ ಇಲ್ಲವಲ್ಲ ಕಂದಾ... ನಿನ್ನೊಡನೆ ನಾನು ಕಾಡಿನಲ್ಲೂ ಸುಖವಾಗಿರಬಲ್ಲೆ. ಹೋಗೋಣ ಬಾ. ಕರ್ಣಾ... ಮಗೂ... ಅಯ್ಯೋ... ನೀರಲ್ಲಿ ತೇಲಿಹೋಗುತ್ತಿದ್ದ ಮಗು ನದಿಯ ನಡುವಲ್ಲಿ ಮುಳುಗುತ್ತಿದೆ. ಬನ್ನಿ ಬನ್ನಿ ಯಾರಾದರೂ ಕಾಪಾಡಿ, ನನ್ನ ಮಗ ಕರ್ಣನ್ನು ಕಾಪಾಡಿ, ಕಾಪಾಡಿ...

ಚೀರುತ್ತಾ ಕನಸೊಡೆದೆದ್ದ ಕುಂತಿಗೆ, ಅರ್ಜುನನ ಗೆಲುವಿನ ಸುದ್ದಿ ಕಾದಿತ್ತು. ■